ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8 ]
Total No. of Printed Pages : 8 ]

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**ಸಂಕೇತ ಸಂಖ್ಯೆ : 96-K**
**Code No. : 96-K**

**B**

**CCE RR**
**Revised & Unrevised**

Question Paper Serial No. **90**

ಇಲ್ಲಿಂದ ಕತ್ತರಿಸಿ

TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

Tear here

# ವಿಷಯ : ಅರ್ಥಶಾಸ್ತ್ರ

# Subject : ECONOMICS

**(ಕನ್ನಡ ಭಾಷಾಂತರ / Kannada Version)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 26. 09. 2020 ] [ Date : 26. 09. 2020

ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.

ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I. **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :** $10 \times 1 = 10$

1. ಭಾರತದಲ್ಲಿ ಸ್ಥಾಪಿಸಲ್ಪಟ್ಟ ಮೊದಲ ಅಣುಶಕ್ತಿ ಕೇಂದ್ರ
   (A) ಕೈಗಾ
   (B) ನರೋರ
   (C) ತಾರಾಪುರ
   (D) ಕಲ್ಪಕಂ

2. "ಮಾನವ ಅಭಿವೃದ್ಧಿಗಾಗಿ ಮಾಡಿದ ಹೂಡಿಕೆಯೇ ಬಂಡವಾಳದ ವಿಧಗಳಲ್ಲಿ ಅತ್ಯಮೂಲ್ಯವಾದದು" ಎಂದು ಹೇಳಿದವರು
   (A) ಆಲ್‌ಫ್ರೆಡ್ ಮಾರ್ಷಲ್
   (B) ಆ್ಯಡಂ ಸ್ಮಿತ್
   (C) ಕಾರ್ಲ್ ಮಾರ್ಕ್ಸ್
   (D) ಎ.ಸಿ. ಪಿಗೋ

3. ಹಸಿರು ಕ್ರಾಂತಿ ಎಂದರೆ
   (A) ಕೃಷಿ ಉತ್ಪಾದನೆಯಲ್ಲಿ ಹೆಚ್ಚಳ
   (B) ಹಣ್ಣುಗಳ ಉತ್ಪಾದನೆಯಲ್ಲಿ ಹೆಚ್ಚಳ
   (C) ಹಾಲಿನ ಉತ್ಪಾದನೆಯಲ್ಲಿ ಹೆಚ್ಚಳ
   (D) ಮೀನಿನ ಉತ್ಪಾದನೆಯಲ್ಲಿ ಹೆಚ್ಚಳ

4. ಎಲ್ಲಾ ಆರ್ಥಿಕ ಚಟುವಟಿಕೆಗಳ ಜೀವನಾಡಿ
   (A) ವ್ಯಾಪಾರ
   (B) ಜಾಹೀರಾತು
   (C) ವಿಮೆ
   (D) ಹಣಕಾಸು

5. 'ಕೈಗಾರಿಕೀಕರಣಗೊಳಿಸಿ ಇಲ್ಲವೇ ವಿನಾಶವಾಗಿ' ಎಂದು ಹೇಳಿದವರು

(A) ಮಹಾತ್ಮ ಗಾಂಧೀಜಿ

(B) ಸರ್ ಎಂ. ವಿಶ್ವೇಶ್ವರಯ್ಯ

(C) ಜವಾಹರಲಾಲ್ ನೆಹರೂ

(D) ಬಾಲಗಂಗಾಧರ್ ತಿಲಕ್

6. ಕಾರ್ಮಿಕ ನೀತಿಯ ಪ್ರಮುಖ ಉದ್ದೇಶ

(A) ಕಾರ್ಮಿಕರ ಕಲ್ಯಾಣ

(B) ಕಾರ್ಮಿಕರ ಸಂಘಟನೆ

(C) ಕಾರ್ಮಿಕರ ಕೌಶಲ್ಯವೃದ್ಧಿ

(D) ಕಾರ್ಮಿಕರ ತರಬೇತಿ

7. ಭಾರತದಲ್ಲಿ ಅಂಚೆಸೂಚಿ ಸಂಖ್ಯೆ ವ್ಯವಸ್ಥೆಯನ್ನು ಜಾರಿಗೆ ತರಲು ಕಾರಣ

(A) ಹಳ್ಳಿಗಳಿಗೆ ಅಂಚೆಸೇವೆ ತಲುಪಿಸಲು

(B) ಅಂಚೆಸೇವೆ ಗಣಕೀಕೃತಗೊಳಿಸಲು

(C) ಅಂಚೆಸೇವೆಯ ಆಧುನೀಕರಣ ಮತ್ತು ಸಮರ್ಥ ನಿರ್ವಹಣೆಗಾಗಿ

(D) ಇ–ಮೇಲ್ ಸೇವೆಯನ್ನು ಹೆಚ್ಚಿಸಲು

8. ಭಾರತದಲ್ಲಿ ಮೊದಲ ಬಾರಿಗೆ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸಲಾದದ್ದು

(A) ಕೋಯ್ನ

(B) ಕಾರ್ಗಲ್

(C) ಡಾರ್ಜಿಲಿಂಗ್

(D) ಶಿವನಸಮುದ್ರ

9. ಸಾಗುವಳಿದಾರರು ನೇರವಾಗಿ ಸರ್ಕಾರಕ್ಕೆ ಭೂ ಕಂದಾಯ ಕಟ್ಟುವ ಪದ್ಧತಿ

(A) ಜಮೀನ್ದಾರಿ ಪದ್ಧತಿ

(B) ರೈತವಾರಿ ಪದ್ಧತಿ

(C) ತಕ್ಕಾವಿ ಪದ್ಧತಿ

(D) ಜಾಗೀರ್‌ದಾರಿ ಪದ್ಧತಿ

10. ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ಕಛೇರಿ ಇರುವುದು

(A) ಕೊಲ್ಕತ್ತಾ

(B) ದೆಹಲಿ

(C) ಬೆಂಗಳೂರು

(D) ಮುಂಬೈ

II. 11. ***A*-ಪಟ್ಟಿಯನ್ನು *B*-ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ :**

$5 \times 1 = 5$

| ***A* ಪಟ್ಟಿ** | ***B* ಪಟ್ಟಿ** |
|---|---|
| (A) ರಾಷ್ಟ್ರೀಯ ಕಾರ್ಮಿಕ ಸಂಘಗಳ ಕಾಂಗ್ರೇಸ್ | (i) ಕಮ್ಯುನಿಸ್ಟ್ ಪಕ್ಷ |
| (B) ಹಿಂದ್ ಮಜದೂರ್ ಸಭಾ | (ii) ಕ್ರಾಂತಿಕಾರಿ ಸಮಾಜವಾದಿ ಪಕ್ಷ |
| (C) ಸಂಯುಕ್ತ ಕಾರ್ಮಿಕ ಸಂಘಗಳ ಕಾಂಗ್ರೇಸ್ | (iii) ಸೋಶಿಯಲಿಸ್ಟ್ ಪಕ್ಷ |
| (D) ಭಾರತೀಯ ಮಜದೂರ್ ಸಂಘ | (iv) ಕಾಂಗ್ರೇಸ್ ಪಕ್ಷ |
| (E) ಕೇಂದ್ರ ಕಾರ್ಮಿಕ ಸಂಘ | (v) ಭಾರತೀಯ ಜನತಾ ಪಕ್ಷ |
| | (vi) ಅಸ್ಸಾಂ ಗಣ ಪರಿಷತ್ |
| | (vii) ತೆಲುಗು ದೇಶಂ ಪಕ್ಷ |

III. **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** 15 × 1 = 15

12. ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ಬಂಡವಾಳ ಸಂಚಯನ ಹೆಚ್ಚಾಗಿರುತ್ತದೆ. ಏಕೆ ?

13. ಕಪ್ಪು ವಜ್ರ ಎಂದು ಕರೆಯಲ್ಪಡುವ ಖನಿಜ ಯಾವುದು ?

14. ಭೂ ಹಿಡುವಳಿಗಳ ಮೇಲಿನ ಗರಿಷ್ಠ ಮಿತಿಯ ಮುಖ್ಯ ಉದ್ದೇಶವೇನು ?

15. ಸಹಕಾರಿ ಪತ್ತಿನ ಸಂಘಗಳ ಮುಖ್ಯ ತತ್ವವೇನು ?

16. ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳನ್ನು ಏಕೆ ಸ್ಥಾಪಿಸಲಾಯಿತು ?

17. ಕಾರ್ಮಿಕ ಸಂಘಗಳ ಉದ್ದೇಶವೇನು ?

18. ಬಡತನ ಎಂದರೇನು ?

19. ಬ್ರಿಟಿಷರು ಭಾರತದಲ್ಲಿ ರೈಲುಸಾರಿಗೆಯನ್ನು ಏಕೆ ಅಭಿವೃದ್ಧಿಪಡಿಸಿದರು ?

20. ಭಾರತ ಸರ್ಕಾರವು 1990 ರಲ್ಲಿ ಮುಕ್ತ ವಾಯು ನೀತಿಯನ್ನು ಜಾರಿಗೊಳಿಸಿತು. ಏಕೆ ?

21. ಪ್ರಪಂಚದಲ್ಲಿ ಸ್ಥಾಪಿಸಲ್ಪಟ್ಟಿರುವ ಪುರಾತನ ಕೇಂದ್ರ ಬ್ಯಾಂಕ್ ಯಾವುದು ?

22. ವ್ಯಾಪಾರ ಎಂದರೇನು ?

23. ಆರ್ಥಿಕತೆಯ ಪ್ರಮುಖ ಉದ್ದೇಶವೇನು ?

24. ಜನಸಾಂದ್ರತೆ ಎಂದರೇನು ?

25. 1976 ರಲ್ಲಿ ರಾಷ್ಟ್ರೀಯ ಜನಸಂಖ್ಯಾ ನೀತಿಯನ್ನು ಏಕೆ ಜಾರಿಗೊಳಿಸಲಾಯಿತು ?

26. ಬಂದರು ಅಭಿವೃದ್ಧಿ ಇಲಾಖೆಯನ್ನು ಏಕೆ ಸ್ಥಾಪಿಸಲಾಗಿದೆ ?

IV. **ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** 14 × 2 = 28

27. ಮಣ್ಣಿನ ಸವಕಳಿಯಿಂದಾಗುವ ಪರಿಣಾಮಗಳೇನು ?

28. ಭಾರತದಲ್ಲಿ ನೀರಾವರಿಯು ಏಕೆ ಅತ್ಯಾವಶ್ಯಕ ?

29. ಲೇವಾದೇವಿಗಾರರನ್ನು ಪ್ರಮುಖರನ್ನಾಗಿಸಿದ ಅಂಶಗಳು ಯಾವುವು ?

30. 1991 ರ ಹೊಸ ಕೈಗಾರಿಕಾ ನೀತಿಯ ಗುಣಲಕ್ಷಣಗಳನ್ನು ಬರೆಯಿರಿ.

31. ಭಾರತದಲ್ಲಿನ ಬಡತನಕ್ಕೆ ಕಾರಣಗಳನ್ನು ಪಟ್ಟಿ ಮಾಡಿ.

32. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶಗಳೇನು ?

33. ಭಾರತೀಯ ರಿಸರ್ವ್ ಬ್ಯಾಂಕಿನ ಸ್ವಾಯತ್ತ ತರಬೇತಿ ಸಂಸ್ಥೆಗಳು ಯಾವುವು ?

34. ವ್ಯಾಪಾರದ ಪ್ರಕಾರಗಳನ್ನು ತಿಳಿಸಿ.

35. ಮಾನವ ಅಭಿವೃದ್ಧಿ ಸೂಚ್ಯಾಂಕಗಳನ್ನು ಹೆಸರಿಸಿ.

36. ದೇಶದ ಆರ್ಥಿಕ ಅಭಿವೃದ್ಧಿಯು ಸಂಪನ್ಮೂಲಗಳನ್ನು ಅವಲಂಬಿಸಿದೆ. ಸ್ಪಷ್ಟೀಕರಿಸಿ.

37. ಭಾರತದಲ್ಲಿ ಸಾಮಾಜಿಕ ವ್ಯವಸ್ಥೆಯು ಜನಸಂಖ್ಯೆಯ ಏರಿಕೆಗೆ ಕಾರಣವಾಗಿದೆ. ಹೇಗೆ ?

38. ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳನ್ನು ಹೆಸರಿಸಿ.

39. ಬಡತನದ ವಿಧಗಳನ್ನು ಹೆಸರಿಸಿ.

40. ತಕ್ಕಾವಿ ಸಾಲಗಳು ರೈತರಿಗೆ ವರವಾಗಿವೆ. ಹೇಗೆ ?

V. **ಕೆಳಗಿನ ಪ್ರಶ್ನೆಗಳಿಗೆ *ಐದರಿಂದ ಆರು* ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

41. ಜಿಲ್ಲಾ ಕೈಗಾರಿಕಾ ಕೇಂದ್ರದ ಕಾರ್ಯಗಳು ಯಾವುವು ?

42. ಭಾರತೀಯ ರಿಸರ್ವ್ ಬ್ಯಾಂಕಿನ ಕಾರ್ಯಗಳನ್ನು ಪಟ್ಟಿಮಾಡಿ.

43. ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳ ಗುಣಲಕ್ಷಣಗಳನ್ನು ತಿಳಿಸಿ.

44. ರಸ್ತೆಗಳನ್ನು ಹೇಗೆ ವರ್ಗೀಕರಿಸಲಾಗಿದೆ ?

45. ಮಾನವ ಸಂಪನ್ಮೂಲ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ವಿವರಿಸಿ.

46. ತುಂತುರು ನೀರಾವರಿಯು ಪ್ರಚಲಿತ ಭಾರತಕ್ಕೆ ಅವಶ್ಯಕ. ಸ್ಪಷ್ಟೀಕರಿಸಿ.

VI. **ಕೆಳಗಿನ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಉತ್ತರಿಸಿ :** $1 \times 4 = 4$

47. ಅಂತಾರಾಷ್ಟ್ರೀಯ ವ್ಯಾಪಾರವು ಆಧುನಿಕ ಜಗತ್ತಿನಲ್ಲಿ ಅನಿವಾರ್ಯವಾಗಿದೆ. ವಿವರಿಸಿ.